153 ಪ್ರೆ 6 ನ-72-(82) 4RR 0309

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ

ಸೂಚನೆ:-

ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಡಿಸಿ ಮನ್ನಾ ಯೋಜನೆಯಡಿ ಮೀಸಲಿಟ್ಟಿರುವ ಭೂಮಿಯನ್ನು ಇತರ ಉದ್ದೇಶಗಳಿಗೆ ಬಳಕೆಯಾಗಿದ್ದು, ಆದ್ದರಿಂದ 23 ಸಾವಿರ ಪರಿಶಿಷ್ಟರ ಅರ್ಜಿಗಳು 26 ವರ್ಷಗಳ ಹೋರಾಟದ ಬಳಿಕವೂ ಬಾಕಿಯಿದ್ದು, ಈ ಬಗ್ಗೆ ಸರ್ಕಾರವು ಡಿಸಿ ಮನ್ನಾ ಭೂಮಿ ನೀಡುವ ಕುರಿತು.

ಉತ್ತರ:-

ಈ ಹಿಂದಿನ ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿ.ಸಿ ಮನ್ನಾ ಜಮೀನು ಎಂಬ ಪರಿಕಲ್ಪನೆ ಇತ್ತು. ಈ ಹಿಂದೆ Standing orders of the Board of Revenue of the erstwhile provinces of Madras ನಂತೆ Depress Class ವರ್ಗದವರಿಗಾಗಿ DC Manna Land ಎಂದು ಗುರುತಿಸಿ ಮೀಸಲಿರಿಸಲಾಗಿತ್ತು. ಅದರಂತೆ, ಡಿ.ಸಿ.ಮನ್ನಾ ಲ್ಯಾಂಡ್ ಎಂದು ಅಡಂಗಲ್ ನಲ್ಲಿ ಇರುವ ನಮೂದನ್ನು ಆಧರಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ, 1969 ಜಾರಿಗೆ ಬಂದ ನಂತರ ಪಹಣಿ ಪತ್ರಿಕೆಯ ಕಲಂ 11 ರಲ್ಲಿ ಡಿ.ಸಿ ಮನ್ನಾ ಲ್ಯಾಂಡ್ ಎಂದು ದಾಖಲು ಮಾಡಲಾಗಿರುತ್ತದೆ.

ಡಿ.ಸಿ. ಮನ್ನಾ ಜಮೀನುಗಳ ಮಂಜೂರಾತಿಯ ಕುರಿತು ಕೈಗೊಳ್ಳಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ:-

RESERVATION OF LAND FOR Assignment to depressed classes:-

In the case of villages which contain a considerable extent of land available for occupation, the Divisional Officer should, and in all other villages, he may, if he thinks its necessary in the interest of the depressed classes, set apart a specific area for assignment for cultivation to the depressed classes.

ಸದರಿ ಡಿ.ಸಿ. ಮನ್ನಾ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹೊರತುಪಡಿಸಿ ಇತರರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ, 1969 ರಲ್ಲಿ ಸದರಿ ಡಿ.ಸಿ.ಮನ್ನಾ ಜಮೀನನ್ನು ಮಂಜೂರು ಮಾಡುವ ಬಗ್ಗೆ ನಿರ್ದೇಶನವಿರುವುದಿಲ್ಲ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಡಿ.ಸಿ.ಮನ್ನಾ ಜಮೀನುಗಳನ್ನು ಮಂಜೂರಾತಿ ಸಂಬಂಧ ದಿನಾಂಕ:17.08.2017 ರಂದು ಅಂದಿನ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಭ್ಯವಿರುವ 8509.73 ಎಕರೆ ಡಿ.ಸಿ ಮನ್ನಾ ಜಮೀನಿನ ಪೈಕಿ 7366.18 ಎಕರೆ ಜಮೀನನ್ನು ಮತ್ತು ಉಡುಪಿ ಜಿಲ್ಲೆಯಲ್ಲಿ ಲಭ್ಯವಿರುವ 4009.30 ಎಕರೆ ಡಿ.ಸಿ ಮನ್ನಾ ಜಮೀನಿನ ಪೈಕಿ 3092.74 ಎಕರೆ ಜಮೀನನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ. ಎರಡೂ ಜಿಲ್ಲೆಗಳಲ್ಲಿ ಲಭ್ಯವಿದ್ದ 12519.03 ಎಕರೆ ಡಿ.ಸಿ ಮನ್ನಾ ಜಮೀನಿನ ಪೈಕಿ 10458.92 ಎಕರೆ ಜಮೀನನ್ನು ಅಂದರೆ ಶೇಕಡ 83 ರಷ್ಟು ಜಮೀನನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ.

ಬಾಕಿ ಉಳಿದಿರುವ ಶೇಕಡ 17 ರಷ್ಟು ಜಮೀನನ್ನು ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ತಿದ್ದುಪಡಿ ತಂದು ನಿಯಮಗಳನ್ನು ರಚಿಸುವ ಅಗತ್ಯದ ಬಗ್ಗೆ ಮತ್ತು ಲಭ್ಯವಿರುವ ಡಿ.ಸಿ.ಮನ್ನಾ ಜಮೀನುಗಳನ್ನು ದಿನಾಂಕ:17.08.2017 ರಂದು ಅಂದಿನ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಮಂಜೂರು ಮಾಡುವುದು ಸೂಕ್ತವೇ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯೊಂದನ್ನು ಸಲ್ಲಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರನ್ನು ಕೋರಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

ಆರ್‌ಡಿ ೫೯ ಎಲ್‌ಜಿಎ ೨೦೨೫

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು